‘ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆ’ ಗ್ರಂಥಮಾಲಿಕೆ : ಖಂಡ ೬

# ಸ್ವಭಾವದೋಷ ಮತ್ತು ಅಹಂ ಇವುಗಳ ವಿವಿಧ ಲಕ್ಷಣಗಳ ವಿಶ್ಲೇಷಣೆ

(Analysis of various aspects of personality defects and ego)

ಕನ್ನಡ (kannada)


**ಗ್ರಂಥ ನಿರ್ಮಿತಿಯ ಮಾರ್ಗದರ್ಶಕರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷಕರು**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಸಂಕಲನಕಾರರು**

**ಸೌ. ಸುಪ್ರಿಯಾ ಸುರಜಿತ್ ಮಾಥೂರ್**

**ಕು. ಮಧುರಾ ಭಿಕಾಜಿ ಭೋಸಲೆ**


**ಸನಾತನ ಸಂಸ್ಥೆ**

ಸೆಪ್ಟೆಂಬರ್ ೨೦೨೩ ರವರೆಗೆ ಸನಾತನದ ೩೬೨ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೪,೩೫,೦೦೦ ಪ್ರತಿಗಳು !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟ** : ಕು. ಭಾವಿನಿ ಪ್ರತಾಪ ಕಪಾಡಿಯಾ
ಕು. ಸಿದ್ಧಿ ಮಹೇಂದ್ರ ಕ್ಷತ್ರಿಯ

**First Edition** : Vijayadashami, Kaliyug Varsh 5120
(18th October 2018)

**Second Edition** : Gurupournima, Kaliyug Varsh 5123
(23rd July 2021)

**Second Edition Third Reprint** : Navaratrarambha, Kaliyug Varsh 5125
(15th October 2023)

Translated from the original Marathi text 'Swabhavdosh Ani Aham Yanchya Vividh Pailunche Vishleshan'
ಪ್ರಸ್ತುತ ಗ್ರಂಥವು ಹಿಂದಿ ಭಾಷೆಯಲ್ಲೂ ಲಭ್ಯವಿದೆ.

**ಅನುವಾದಕರು** : ಕು. ರಶ್ಮಿ ರಮೇಶ ನಾಯಕ್
ಶ್ರೀ. ಗಣೇಶ ರಾಜಾರಾಮ್ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010

**ದೇಣಿಗೆ ಮೌಲ್ಯ** : ₹ 85/-

**ISBN** : 978-81-949233-8-1 ॐ ಗ್ರಂಥ ಕ್ರ. : 307

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ಗ್ರಂಥದ ಅನುಕ್ರಮಣಿಕೆ

೧. ಸ್ವಭಾವದೋಷಗಳು ನಿರ್ಮಾಣವಾಗುವುದರ ಕೆಲವು ಕಾರಣಗಳು ೧೧

೨. ಸಾಧನೆಯಲ್ಲಿನ ಅಡಚಣೆಗಳು ೧೨

೩. ವಿವಿಧ ಸ್ವಭಾವದೋಷಗಳ ವಿಶ್ಲೇಷಣೆ ೧೫

೪. ಸ್ವಭಾವದೋಷಗಳ ಹಿಂದೆ ಅಹಂ ಅಡಗಿರುತ್ತದೆ ೨೮

೫. ಸ್ವಭಾವದೋಷಗಳಿಂದ ಆಗುವ ಹಾನಿ ೨೯

೬. ಅಹಂ (ಅರ್ಥ, ವಿಧಗಳು ಮತ್ತು ಲಕ್ಷಣಗಳು) ೩೦

೭. ತಪ್ಪುಗಳಾಗುವುದು ಮತ್ತು ಸ್ವೀಕರಿಸುವುದು ೪೯

೮. ಸನಾತನದ ಆಶ್ರಮದಲ್ಲಿನ 'ಯುವ ಸಾಧನಾಶಿಬಿರ'ದಲ್ಲಿ ಪಾಲ್ಗೊಂಡ ಸಾಧಕಿಯು 'ಸ್ವಭಾವದೋಷ ನಿಮೂಲನೆ'ಯ ಬಗ್ಗೆ ವ್ಯಕ್ತಪಡಿಸಿದ ವಿಚಾರಗಳು ೫೭

೯. 'ನಾಮಜಪ, ಸತ್ಸಂಗ, ಸತ್ಸೇವೆ ಇತ್ಯಾದಿ ಸಾಧನೆಗಳನ್ನು ಮಾಡುವುದರಿಂದಾಗುವ ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆಗಿಂತಲೂ ಸಾಧನೆಗೆ 'ಸ್ವಭಾವದೋಷ ಮತ್ತು ಅಹಂ ನಿರ್ಮೂಲನ ಪ್ರಕ್ರಿಯೆ'ಯನ್ನು ಜೊತೆಗೂಡಿಸಿದರೆ ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆಯು ಬೇಗನೆ ಮತ್ತು ಹೆಚ್ಚು ಪ್ರಮಾಣದಲ್ಲಿ ಆಗುತ್ತದೆ' ಎಂಬುದನ್ನು ತೋರಿಸುವ 'ಮಹರ್ಷಿ ಅಧ್ಯಾತ್ಮ ವಿಶ್ವವಿದ್ಯಾಲಯ'ವು ಮಾಡಿದ ಸಮೀಕ್ಷೆ (ಸರ್ವೇ) ೫೮

೧೦. 'ಸ್ವಭಾವದೋಷ ಮತ್ತು ಅಹಂ ನಿರ್ಮೂಲನ ಪ್ರಕ್ರಿಯೆ'ಯನ್ನು ನಡೆಸಿದ್ದರಿಂದ ಸಾಧಕರಿಗಾದ ಲಾಭವನ್ನು ತೋರಿಸಲು 'ಯು.ಎ.ಎಸ್ (ಯುನಿವರ್ಸಲ್ ಔರಾ ಸ್ಕ್ಯಾನರ್)' ಎಂಬ ಉಪಕರಣದ ಮೂಲಕ ಮಾಡಿದ ವೈಜ್ಞಾನಿಕ ಸಮೀಕ್ಷೆ ೬೨

卐 **ಅಧ್ಯಾಯ :** ಸಾಧಕರಿಂದ 'ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆ'ಯ ಪ್ರಕ್ರಿಯೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಳ್ಳುವ ಮತ್ತು ಅವರನ್ನು ಸರ್ವಾಂಗೀಣವಾಗಿ 'ಸಾಧಕ'ರನ್ನಾಗಿ ರೂಪಿಸುವ ಸನಾತನದ ಸದ್ಗುರು ರಾಜೇಂದ್ರ ಶಿಂದೆ ! ೬೭

卐 **'ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ' ಮತ್ತು ಇತರ ಮಾಹಿತಿ** **೮೩**

# ಸ್ವಭಾವದೋಷ ಮತ್ತು ಅಹಂ ಇವುಗಳ ನಿರ್ಮೂಲನೆಯ ಪ್ರಕ್ರಿಯೆಯನ್ನು ಕಲಿಯಿರಿ ಮತ್ತು ಜೀವನವನ್ನು ಆನಂದಮಯವಾಗಿಸಿ !

'ಸ್ವಭಾವದೋಷ ಮತ್ತು ಅಹಂ ಇವು ಈಶ್ವರಪ್ರಾಪ್ತಿಗಾಗಿ ಮಾಡುವ ಸಾಧನೆಯಲ್ಲಿನ ಎರಡು ದೊಡ್ಡ ಅಡಚಣೆಗಳಾಗಿವೆ. ಸ್ವಭಾವದೋಷ ಮತ್ತು ಅಹಂ ಇದ್ದರೆ ವ್ಯಕ್ತಿಯ ವೈಯಕ್ತಿಕ ಜೀವನವೂ ದುಃಖಮಯವಾಗುತ್ತದೆ ಮತ್ತು ವ್ಯಕ್ತಿತ್ವದ ವಿಕಾಸವೂ ಕುಂಠಿತಗೊಳ್ಳುತ್ತದೆ. ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆಯ ಪ್ರಕ್ರಿಯೆಗಾಗಿ ಭಾರತದಲ್ಲಿನ ಅನೇಕ ರಾಜ್ಯಗಳಿಂದ ಸನಾತನದ ಗೋವಾದಲ್ಲಿನ ರಾಮನಾಥಿ ಆಶ್ರಮಕ್ಕೆ ಅನೇಕ ಸಾಧಕರು ಬರುತ್ತಾರೆ. ಆಶ್ರಮದಲ್ಲಿನ 'ಅಡುಗೆ ವಿಭಾಗ'ವು ಪ್ರಕ್ರಿಯೆಯ ಕೇಂದ್ರ ಬಿಂದುವಾಗಿದೆ. ಏಕೆಂದರೆ ಅಡುಗೆ ವಿಭಾಗದ ಪೂ. ರೇಖಾ ಕಾಣಕೋಣಕರ್ ಮತ್ತು ಸೌ. ಸುಪ್ರಿಯಾ ಮಾಥೂರ್ ಇವರು ಸಾಧಕರಿಗೆ ಪ್ರಕ್ರಿಯೆಯ ಬಗ್ಗೆ ಮಾರ್ಗದರ್ಶನ ಮಾಡುತ್ತಾರೆ ಮತ್ತು ಅಡುಗೆ ವಿಭಾಗದಲ್ಲಿ ಸೇವೆಯನ್ನು ಮಾಡಿಸುವುದರ ಮೂಲಕ ಸಾಧಕರಿಗೆ ಪ್ರಕ್ರಿಯೆಗೆ ಸಂಬಂಧಿಸಿದ ಪ್ರಾಯೋಗಿಕ ಭಾಗವನ್ನೂ ಕಲಿಸುತ್ತಾರೆ. ಇದರಿಂದಾಗಿ ನೂರಾರು ಸಾಧಕರು ಕೆಲವು ತಿಂಗಳುಗಳಲ್ಲಿಯೇ ಯೋಗ್ಯ ರೀತಿಯಲ್ಲಿ ಸಾಧನೆ ಮಾಡಲು ಆರಂಭಿಸುತ್ತಾರೆ.

ಪೂ. ರೇಖಾ ಕಾಣಕೋಣಕರ್ ಮತ್ತು ಸೌ. ಸುಪ್ರಿಯಾ ಮಾಥೂರ್ ಇವರು ಸಾಧಕರಿಗೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಏನು ಮಾರ್ಗದರ್ಶನ ಮಾಡುತ್ತಾರೆ, ಸಾಧಕರಿಂದ ಪ್ರಕ್ರಿಯೆಯನ್ನು ಹೇಗೆ ಮಾಡಿಸಿಕೊಳ್ಳುತ್ತಾರೆ ಎಂಬುದರ ಬಗ್ಗೆ ಅನೇಕ ಸಾಧಕರಿಗೆ ಕುತೂಹಲವಿರುತ್ತದೆ. ೨೦೧೬ ರಲ್ಲಿ ಮಾರ್ಚ್, ಏಪ್ರಿಲ್ ಮತ್ತು ಮೇ ಈ ಮೂರು ತಿಂಗಳುಗಳಲ್ಲಿ ಸನಾತನದ ಜ್ಞಾನ ಪಡೆಯುವ ಸಾಧಕಿಯಾದ ಕು. ಮಧುರಾ ಭೋಸಲೆ ಇವರಿಗೆ ಸೌ. ಸುಪ್ರಿಯಾ ಮಾಥೂರ್‌ರವರು ತೆಗೆದುಕೊಳ್ಳುವ ಇಂತಹ ಸತ್ಸಂಗಗಳಲ್ಲಿ ಉಪಸ್ಥಿತರಿರಲು ಅವಕಾಶ ಸಿಕ್ಕಿತು. ಸೌ. ಸುಪ್ರಿಯಾ ಮಾಥೂರ್‌ರವರ ಮಾರ್ಗದರ್ಶನವನ್ನು ಕು. ಮಧುರಾ ಭೋಸಲೆಯವರು ಪ್ರಸ್ತುತ ಗ್ರಂಥದ ಸ್ವರೂಪದಲ್ಲಿ ಸುಂದರವಾಗಿ ಸಂಕಲನ ಮಾಡಿದ್ದಾರೆ. ಅದರಿಂದ ಎಲ್ಲ ಸಾಧಕರಿಗೆ ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆಯ ಪ್ರಕ್ರಿಯೆಯ ಬಗ್ಗೆ ದಿಶೆ ಸಿಗಬಹುದು. ಬಹಳಷ್ಟು ಸಾಧಕರಿಗೆ ಪ್ರಕ್ರಿಯೆಯನ್ನು ಕಲಿಯುವ ತೀವ್ರ ಇಚ್ಛೆಯಿದ್ದರೂ ಕೆಲವು ಅಡಚಣೆಗಳಿಂದಾಗಿ ರಾಮನಾಥಿ ಆಶ್ರಮಕ್ಕೆ ಬಂದು ಪ್ರಕ್ರಿಯೆಯನ್ನು ಕಲಿಯಲು ಸಾಧ್ಯವಾಗುವುದಿಲ್ಲ. ಅಂತಹವರಿಗೆ ಈ ಗ್ರಂಥವು ಖಂಡಿತವಾಗಿಯೂ ತುಂಬಾ

ಉಪಯುಕ್ತವಾಗಿದೆ. ಕೇವಲ ಅನೇಕ ವರ್ಷಗಳಿಂದ ಸಾಧನೆಯನ್ನು ಮಾಡುವವರಿಗೆ ಮಾತ್ರವಲ್ಲದೇ, ಜಿಜ್ಞಾಸು ಮತ್ತು ಹೊಸ ಸಾಧಕರಿಗೂ ಈ ಗ್ರಂಥವೆಂದರೆ ಜೀವನದಲ್ಲಿ ಆನಂದಪ್ರಾಪ್ತಿಯ ಮಾರ್ಗವನ್ನು ತೋರಿಸುವ ದೀಪಸ್ತಂಭವಾಗಿದೆ.

ಸೌ. ಸುಪ್ರಿಯಾ ಮಾಥೂರ್‌ರವರಿಗೆ ಕೆಟ್ಟ ಶಕ್ತಿಗಳ ತೀವ್ರ ತೊಂದರೆಯಿದೆ. ಹೀಗಿದ್ದರೂ ಅವರಲ್ಲಿರುವ 'ಎಲ್ಲ ಸಾಧಕರನ್ನು ಸಾಧನೆಯಲ್ಲಿ ಮುಂದೆ ಕರೆದುಕೊಂಡು ಹೋಗುವ ತಳಮಳ ಮತ್ತು ಭಾವ' ಈ ಗುಣಗಳಿಂದಾಗಿ ಅವರು ಸಾಧಕರಿಗೆ ಉತ್ತಮ ಮಾರ್ಗದರ್ಶನ ಮಾಡಿ ಅವರಲ್ಲಿ ಬದಲಾವಣೆಯನ್ನು ತರುತ್ತಿದ್ದಾರೆ. ಇದು ನಿಜವಾಗಿಯೂ ಪ್ರಶಂಸನೀಯವಾಗಿದೆ.

ಸನಾತನದ 'ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆ' ಈ ಮಾಲಿಕೆಯಲ್ಲಿನ ಇತರ ೫ ಗ್ರಂಥಗಳು ಮತ್ತು 'ಅಹಂ ನಿರ್ಮೂಲನೆ' ಈ ವಿಷಯದಲ್ಲಿನ ೧ ಗ್ರಂಥ ಇವೂ ಕೂಡ ಉಪಲಬ್ಧವಿವೆ. ಅವುಗಳಲ್ಲಿ ಆಯಾ ವಿಷಯಗಳ ಬಗೆಗಿನ ಮೂಲಭೂತ ತಾತ್ತ್ವಿಕ ಮತ್ತು ಪ್ರಾಯೋಗಿಕ ಮಾಹಿತಿಯನ್ನು ನೀಡಲಾಗಿದೆ. ವಾಚಕರು ಮೊದಲು ಆ ಗ್ರಂಥಗಳನ್ನು ಅಭ್ಯಾಸ ಮಾಡಿದರೆ ಅವರಿಗೆ ಪ್ರಸ್ತುತ ಖಂಡ ಒಳ್ಳೆಯ ರೀತಿಯಲ್ಲಿ ಅರ್ಥವಾಗಬಹುದು. ಏಕೆಂದರೆ ಪ್ರಸ್ತುತ ಖಂಡದಲ್ಲಿ ಮುಖ್ಯವಾಗಿ 'ಸ್ವಭಾವದೋಷ ಮತ್ತು ಅಹಂ ಇವುಗಳ ನಿರ್ಮೂಲನೆಯ ಪ್ರಕ್ರಿಯೆಯನ್ನು ನಡೆಸುತ್ತಿರುವವರಿಗೆ ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ನಿರ್ದಿಷ್ಟವಾಗಿ ಹೇಗೆ ನಡೆಸಬೇಕು' ಎಂಬುದರ ಮಾರ್ಗದರ್ಶನವನ್ನು ಮಾಡಲಾಗಿದೆ.

'ಈ ಖಂಡದ ಅಧ್ಯಯನದಿಂದ ಎಲ್ಲ ಸಾಧಕರಿಗೆ ಪ್ರಕ್ರಿಯೆಯನ್ನು ಒಳ್ಳೆಯ ರೀತಿಯಲ್ಲಿ ನಡೆಸಲು ಸಾಧ್ಯವಾಗಿ ಅವರ ಜೀವನವು ಆನಂದಮಯವಾಗಲಿ ಮತ್ತು ಅವರಿಗೆ ಶೀಘ್ರವಾಗಿ ಈಶ್ವರಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಾಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !'

– (ಪರಾತ್ಪರ ಗುರು) ಡಾ. ಆಠವಲೆ (೯.೯.೨೦೧೭)

## ಸಾಧನೆಗೆ ಸಂಬಂಧಿಸಿದ ಸನಾತನದ ಗ್ರಂಥಗಳು !

- ಗುರುಗಳ ಮಹತ್ವ
- ಗುರುಗಳ ವಿಧಗಳು ಮತ್ತು ಗುರುಮಂತ್ರ
- ಗುರುಕೃಪಾಯೋಗದ ಮಹಿಮೆ
- ಗುರುಕೃಪಾಯೋಗಾನುಸಾರ ಸಾಧನೆ
- ಭಾವದ ವಿಧಗಳು ಮತ್ತು ಜಾಗೃತಿ
- ಸಮಷ್ಟಿ ಸಾಧನೆಗಾಗಿ ಆವಶ್ಯಕ ಗುಣಗಳು